# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/02/2015-16 ದಿನಾಂಕ:11.08.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಶ್ರೀಮತಿ ಬಿ.ಆರ್.ಕಸ್ತೂರಮ್ಮ ಗಂಡ ಜ್ಯೋತೆಪ್ಪ<br>ಗ್ರಾಮ:-ಬೆಣಕಲ್ಲು ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಅಶೋಕ ಕನಕೇರಿ ವಕೀಲರು, ಹ.ಬೊ.ಹಳ್ಳಿ] | ಶ್ರೀ ಬಿ.ಆರ್.ಬಸವನಗೌಡ ತಂದೆ ವೀರನಗೌಡ<br>ಗ್ರಾಮ:-ಬೆಣಕಲ್ಲು ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಕೊಟ್ರೇಶ.ಎಸ್ ಶೆಟ್ಟರ್, ವಕೀಲರು,ಹ.ಬೊ.ಹಳ್ಳಿ] |

**ವಿವಾದಿತಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಬೆಣಕಲ್ಲು | 101ಎ | 2-89 | ಖುಷ್ಕಿ |
| 2. | ” | ” | 102/ಎ | 0-84 | ” |
| 3. | ” | ” | 102/ಬಿ | 1-55 | ” |
| 4. | ” | ” | 103 | 10-86 | ” |
| 5. | ” | ” | 275/ಎ | 4-09 | ” |
| 6. | ” | ” | 275/ಬಿ | 4-80 | ” |
| 7. | ” | ” | 288/ಇ | 0-05 | ” |
| 8. | ” | ” | 324 | 1-30 | ” |
| 9. | ” | ” | 330/ಎ | 3-01 | ” |
| 10. | ” | ” | 331/ಬಿ/1 | 3-21 | ” |
| 11. | ” | ” | 331/ಸಿ/ಸಿ/6 | 0-29 | ” |
| 12 | ” | ” | 331/ಸಿ/ಸಿ/1 | 1-97 | ” |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ವಿವಾದಿತ ಜಮೀನುಗಳಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ನಿವಾಸಿಯಾದ ಬಿ.ಆರ್.ಕಸ್ತೂರಮ್ಮ ಗಂಡ ಜ್ಯೋತೆಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:12.03.2015 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:22.04.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:27.03.2015 ರಂದು ಬಿ.ಆರ್.ಬಸವನಗೌಡ ತಂದೆ ವೀರನಗೌಡ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.41/14-15ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:06.05.2015ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:06.05.2015 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ದಿನಾಂಕ:06.05.2015 ರಂದು ಉಭಯ ಪಕ್ಷಕಾರರ ಪರ ವಕೀಲರು ಹಾಜರಾಗಿರುತ್ತಾರೆ. ವಾದಿ ಪರ ಅಶೋಕ ಕನಕೇರಿ, ವಕೀಲರು ತಮ್ಮ ವಕಾಲತ್ತು ಅರ್ಜಿಯನ್ನು ಹೆಚ್.ಮಹಾಲಿಂಗಪ್ಪ, ವಕೀಲರು ಇವರದ್ವಾರ ಸಲ್ಲಿಸಿರುತ್ತಾರೆ. ಮತ್ತು ಪ್ರತಿವಾದಿಯ ಪರ ಕೊಟ್ರೇಶ ಎಸ್ ಶೆಟ್ಟರ್, ವಕೀಲರು, ಹ.ಬೊ.ಹಳ್ಳಿ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣವನ್ನು ದಿನಾಂಕ:08.07.2015 ರಂದು ಉಭಯ ಪಕ್ಷಕಾರರಪರ ವಕೀಲರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು ಹೇಳುವಂತೆ; ಅರ್ಜಿದಾರರ ಪರವಾಗಿ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ. ತಕರಾರುದಾರರ ಪರ ವಕೀಲರು; ದಾಖಲೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲು ಕೋರಿರುತ್ತಾರೆ.

ಪ್ರಕರಣವನ್ನು ದಿನಾಂಕ:21.08.2015 ರಂದು ಉಭಯರ ಪರ ವಕೀಲರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು ಹೇಳುವಂತೆ; ಪೌತಿ ವಾರಸು ಪ್ರಕಾರ ಪಹಣಿಯಲ್ಲಿ ಜಂಟಿಯಾಗಿ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ. ತಕರಾರುದಾರರ ಪರ ವಕೀಲರು ಹೇಳುವಂತೆ; ಸದರಿ ಜಮೀನು ಪಾಲು ವಿಭಾಗ ಆಗಿರುವುದಿಲ್ಲ ವೆಂದು ತಿಳಿಸುತ್ತಾ, ಲಿಖಿತವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣವನ್ನು ದಿನಾಂಕ:21.09.2015 ರಂದು ಉಭಯರ ಪರ ವಕೀಲರು ಹಾಜರಾಗಿರುತ್ತಾರೆ. ಅರ್ಜಿದಾರರು ಪರ ವಕೀಲರು ಹಾಜರಾಗಿ ಹೇಳುವಂತೆ; ಸದರಿ ಪಹಣಿಯು ಬಿ.ಆರ್.ಸಕ್ರಗೌಡ [ಪೌತಿ] ಇವರಿಂದ ಸಂಬಂಧಿಸಿದ ವಂಶವೃಕ್ಷವನ್ನು ನೀಡಲಾಗಿ ಸದರಿ ಪ್ರಕರಣವನ್ನು ಪೌತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ತಕರಾರುದಾರರ ಪರ ವಕೀಲರಾದ ಬಿ.ಬಸವರಾಜ ಇವರು ಸದರಿ ಪ್ರಕರಣವನ್ನು ಈಗಾಗಲೇ ತಮ್ಮ ಕಛೇರಿಯಲ್ಲಿ ಸಂ:ಕಂ:ಪಹಣಿ:ವಿವಾದ:60/07-08 ದಿನಾಂಕ:04.01.2008 ರಂದು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಯಥಾವತ್ತಾಗಿ ಪಹಣಿ ಮಾಡಲು ಆದೇಶಿಸಿರುತ್ತಾರೆಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಮುಂದುವರೆದು ದಿನಾಂಕ:03.12.2015 ರಂದು ಈ ಹಿಂದೆ ಸಂ:ಕಂ:ಪಹಣಿ:ವಿವಾದ:60/07-08 ದಿನಾಂಕ:04.01.2008 ರ ಉಪತಹಶೀಲ್ದಾರರು ನಾಡಕಾರ್ಯಾಲಯ ತಂಬ್ರಹಳ್ಳಿ ಇವರ ನ್ಯಾಯಾಲಯದ ನೆರಳು ಪ್ರತಿಯನ್ನು ಹಾಜರು ಪಡಿಸಿರುತ್ತಾರೆ.

ಮುಂದುವರೆದು ಪ್ರಕರಣವನ್ನು ದಿನಾಂಕ:23.06.2016 ರಂದು ಉಭಯರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು, ಹೇಳುವಂತೆ; ಅರ್ಜಿದಾರರ ಪರವಾಗಿ ಪೌತಿವಾರಸು ಪ್ರಕಾರ ಅರ್ಜಿದಾರರಜೊತೆಗೆ ಎಸ್.ಶಾರದ ಪಾಟೀಲ್, ಕೆ.ಎಸ್.ಮರಳುಸಿದ್ದನಗೌಡ ಮೈ.ಗಾ.ಕೊಟ್ರೇಶ್ವರಗೌಡ ಇವರ ಹೆಸರಿಗೆಜಂಟಿಯಾಗಿ ಪೌತಿವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆ ನೀಡಿರುತಾರೆ.

ಪ್ರಕರಣದಲ್ಲಿ ಅರ್ಜಿದಾರರು/ಪರ ವಕೀಲರು ಮತ್ತು ತಕರಾರುದಾರರು/ಪರ ವಕೀಲರು ಇವರ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ತಕರಾರುದಾರರು ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಿಲ್ಲ. ಹಾಗೂ ವಾರಸುದಾರರಿಗೆ ಉದ್ಭವಿಸಿದ ಪ್ರಶ್ನೆಯಾಗಿರುವುದರಿಂದ ಮತ್ತು ಈಗಾಗಲೇ ಉಪತಹಶೀಲ್ದಾರರ ನ್ಯಾಯಾಲಯ ತಂಬ್ರಹಳ್ಳಿ ಇವರ ಆದೇಶ ಸಂಖ್ಯೆ ಸಂ:ಕಂ:ಪಹಣಿ:ವಿವಾದ:60/07-08 ದಿನಾಂಕ:04.01.2008 ರನ್ವಯ ಸದರಿ ಸ.ನಂ.ಗಳಿಗೆ ಸಂಬಂಧಿಸಿದಂತೆ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಳ್ಳಲು ಆದೇಶಿಸಿರುವುದು ಕಂಡುಬಂದಿರುತ್ತೆದೆ. ಕಾರಣ, ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.41/2014-15ರ ಪ್ರಕಾರ, ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಉಭಯ ಪಕ್ಷಕಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

11/8/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

ಉಪ ತಹಸಿಲ್ದಾರ್,
ನಾಡ ಕಛೇರಿ,
ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧ ಪ್ರತಿಕಡತಕ್ಕೆ.